ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	17
ಸದಸ್ಯರ ಹೆಸರು	:	ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	09-12-2020.
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಷ್ಟ್ರೀಯ ಹೆದ್ದಾರಿ ಎನ್‌ಹೆಚ್-75 ರ ಹಾಸನ-ಸಕಲೇಶಪುರ ರಸ್ತೆ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು; ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; (ವರ್ಷವಾರು ಮಾಹಿತಿಯನ್ನು ನೀಡುವುದು)	
ಆ	ಈ ಕಾಮಗಾರಿಗಳನ್ನು ಪಡೆದಿರುವ ಗುತ್ತಿಗೆದಾರರು/ ಏಜೆನ್ಸಿಗಳ ವಿವರ ನೀಡುವುದು; ಈ ಕಾಮಗಾರಿಗಳು ಪ್ರಸ್ತುತ ಯಾವ ಹಂತಗಳಲ್ಲಿವೆ; (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು)	

ರಾಷ್ಟ್ರೀಯ ಹೆದ್ದಾರಿ-75 ಕರ್ನಾಟಕ ರಾಜ್ಯದಲ್ಲಿ ಬಿ.ಸಿ.ರೋಡ್ ನಿಂದ ಪ್ರಾರಂಭವಾಗಿ ಕೋಲಾರದವರೆಗೆ ಕಿಮೀ.418 ರವರೆಗೆ ಹಾದುಹೋಗುತ್ತದೆ. ಈ ಹಿಂದೆ 2015 ನೇ ಸಾಲಿನಿಂದ 2017 ರವರೆಗೆ ಮೇಲ್ಕಂಡ ರಸ್ತೆಯು ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯವ್ಯಾಪ್ತಿಯಲ್ಲಿದ್ದು, ತದನಂತರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಲಾಗಿದೆ. ಕೋಲಾರ ಗಡಿವರೆಗೆ 402.92 ಕಿಮೀ. ಉದ್ದ ಹಾದು ಹೋಗುತ್ತಿದ್ದು, ಸದರಿ ರಸ್ತೆಯ ಹಾಸನ-ಸಕಲೇಶಪುರ ಭಾಗದ ಕಾರ್ಯವ್ಯಾಪ್ತಿಯ ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವರ್ಷ	ಕಾಮಗಾರಿಗಳ ವಿವರ	ಮಂಜೂರಾದ ಮೊತ್ತ ರೂ ಕೋಟಿಗಳಲ್ಲಿ	ಷರಾ
	ರಾಷ್ಟ್ರೀಯ ಹೆದ್ದಾರಿ ವಲಯ ವತಿಯಿಂದ ತೆಗೆದುಕೊಂಡ ಕಾಮಗಾರಿಗಳ ವಿವರ			
1	2015 ರಿಂದ 2017	ಕಿ.ಮೀ.216.00 (ಗುಳಗಳಲೆ) ರಿಂದ ಕಿ.ಮೀ.237.00 (ಹೆಗ್ಗದ್ದೆ) ವರೆಗೆ ರಸ್ತೆ ಬಲಪಡಿಸುವಿಕೆ ಮತ್ತು ಕಿ.ಮೀ 250.620 (ಕೆಂಪುಹೊಳೆ) ಯಿಂದ ಕಿ.ಮೀ 263.00 (ಅಡ್ಡಹೊಳೆ) ವರೆಗೆ ಕಾಂಕ್ರೀಟ್‌ರಸ್ತೆ ನಿರ್ಮಾಣ.	85.28 (ಟೆಂಡರ್ ಮೊತ್ತ ರೂ.90.27 ಕೋಟಿ)	ಸದರಿ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ॥ ಜಿ.ವಿ.ಆರ್ ಇನ್‌ಫ್ರಾ ಪ್ರಾಜೆಕ್ಟ್ಸ್, ಚೆನ್ನೈರವರಿಗೆ ವಹಿಸಿಕೊಡಲಾಗಿತ್ತು. ಇದರಲ್ಲಿ ಕಿ.ಮೀ 219.534 ರಿಂದ ಕಿ.ಮೀ 228.900 ವರೆಗ ಬಲಪಡಿಸುವಿಕೆ ಕಾಮಗಾರಿಯನ್ನು ದಿನಾಂಕ: 06-11-2015 ರಿಂದ 4-01-2017ರ ಅವಧಿಯಲ್ಲಿ ಕೈಗೊಳ್ಳಲಾಗಿತ್ತು. ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ನಿಗದಿಪಡಿಸಿದ (Milestone) ಪ್ರಗತಿಯನ್ನು ಸಾಧಿಸದೇ ಇದ್ದ ಕಾರಣ ದಿನಾಂಕ 04-01-2017 ರಂದು ಗುತ್ತಿಗೆ ಕರಾರನ್ನು ರದ್ದುಪಡಿಸಲಾಗಿರುತ್ತದೆ. ಗುತ್ತಿಗೆದಾರರು ರೂ.9.33 ಕೋಟಿಗಳ ಪ್ರಗತಿಯನ್ನು ಸಾಧಿಸಿರುತ್ತಾರೆ. ತದನಂತರ 2017 ರಲ್ಲಿ ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಗೊಂಡಿರುತ್ತದೆ.

	ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಹಸ್ತಾಂತರಿಸಿದ ನಂತರ ಕೈಗೊಂಡ ಕಾಮಗಾರಿಗ ವಿವರ			
2	2018 2019 2020	ರಾಷ್ಟ್ರೀಯ ಹೆದ್ದಾರಿ-75ರ ಭಾಗದಲ್ಲಿ (ಹಳೆಯ ರಾಷ್ಟ್ರೀಯ ಹೆದ್ದಾರಿ-48) ಹಾಸನ (ಹಾಲಿ ಕಿ.ಮೀ.189+700, ಡಿಸೈನ್ ಚೈನೇಜ್ 184+912) ರಿಂದ ಮಾರನಹಳ್ಳಿ (ಹಾಲಿ ಕಿ.ಮೀ.237+000, ಡಿಜೈನ್ ಚೈನೇಜ್ 230+060) ವರೆಗೆ EPC ಅಡಿಯಲ್ಲಿ ಚತುಷ್ಪಥ ರಸ್ತೆ ನಿರ್ಮಾಣ.	ರೂ.21.98 ರೂ.11.07 ರೂ.64.45 ವೆಚ್ಚ (ಸಿವಿಲ್ ಕಾಮಗಾರಿ ಹಾಗೂ ನಿರ್ವಹಣೆ)	ಸದರಿ ಕಾಮಗಾರಿಯ ಯೋಜನಾ ಮೊತ್ತ ರೂ.573.92 ಕೋಟಿಗಳಿಗೆ ಗುತ್ತಿಗೆದಾರರಾದ M/s Isolux Corsan India Engineering & Construction Pvt Ltd. ರವರಿಗೆ ದಿನಾಂಕ: 06-03-2017 ರಂದು ಸದರಿ ಕಾಮಗಾರಿಯನ್ನು ವಹಿಸಲಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ದಿನಾಂಕವು 07-03-2019 ಆಗಿರುತ್ತದೆ. ಆದರೆ, ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ: 10-03-2022 ರ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇರುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕ್ರ ಸಂ	ಕಾರ್ಯವ್ಯಾಪ್ತಿ ವಿವರ	ಸರಪಳಿ	ಕಿ.ಮೀ ಉದ್ದ	ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ದಿನಾಂಕ
1	ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ	ಕಿ.ಮೀ.189.500 (ಹಾಸನ)ನಿಂದ ಕಿ.ಮೀ 216.00 (ಗುಳಗಳಲೆ)	26.50	08.05.2017
2		ಕಿ.ಮೀ 216.00 (ಗುಳಗಳಲೆ) ನಿಂದ ಕಿ.ಮೀ.237.00 (ಹೆಗ್ಗದ್ದೆ)	21.00	03.04.2017

ಇ	ಈ ಯೋಜನೆಯ ಕಾಮಗಾರಿಗಳು ಕಳಪೆ ಗುಣಮಟ್ಟ ಹೊಂದಿವೆಯೆಂದು ಸಾರ್ವಜನಿಕರಿಂದ ದೂರುಗಳು ಬಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಗುತ್ತಿಗೆದಾರರು /ಏಜೆನ್ಸಿಗಳು ಮತ್ತು ಕಾಮಗಾರಿಗಳ ಮೇಲ್ವಿಚಾರಣೆ ವಹಿಸಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? (ಪ್ರಕರಣವಾರು ವಿವರ ನೀಡುವುದು)

ಕ್ರ ಸಂ	ಕಾಮಗಾರಿಯ ವಿವರ	ಷರಾ
1	ಕಿ.ಮೀ 216.00 (ಗುಳಗಳಲೆ) ರಿಂದ ಕಿ.ಮೀ.237.00 (ಹೆಗ್ಗದ್ದೆ) ವರೆಗೆ ರಸ್ತೆ ಬಲಪಡಿಸುವಿಕೆ ಮತ್ತು ಕಿ.ಮೀ.250.620 (ಕೆಂಪುಹೊಳೆ) ಯಿಂದ ಕಿ.ಮೀ.263.00 (ಅಡ್ಡಹೊಳೆ) ವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ.	ಹಾಸನ-ಸಕಲೇಶಪುರ ರಸ್ತೆಯ ಕಿ.ಮೀ 216.00 (ಗುಳಗಳಲೆ) ರಿಂದ ಕಿ.ಮೀ 237.00 (ಹೆಗ್ಗದ್ದೆ) ವರೆಗೆ ರಸ್ತೆ ಬಲಪಡಿಸುವಿಕೆ ಮತ್ತು ಕಿ.ಮೀ 250.620 (ಕೆಂಪುಹೊಳೆ) ರಿಂದ ಕಿ.ಮೀ.263.00 (ಅಡ್ಡಹೊಳೆ) ವರೆಗೆ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಿಕೊಂಡು ನಿರ್ವಹಿಸಲಾಗಿರುತ್ತದೆ. ಸಾರ್ವಜನಿಕರಿಂದಲೂ ಯಾವುದೇ ದೂರುಗಳು ಬಂದಿರುವುದಿಲ್ಲ. ಆದುದರಿಂದ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದರೆ, ಸದರಿ ಕಾಮಗಾರಿಯಲ್ಲಿ ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ನಿಗಧಿಪಡಿಸಿದ ಪ್ರಗತಿಯನ್ನು ಸಾಧಿಸದೇ ಇದ್ದ ಕಾರಣ ದಿನಾಂಕ:04-01-2017 ರಂದು ಗುತ್ತಿಗೆ ಕರಾರನ್ನು ರದ್ದು ಪಡಿಸಲಾಗಿರುತ್ತದೆ.

	2	ರಾಷ್ಟ್ರೀಯ ಹೆದ್ದಾರಿ-75ರ ಭಾಗದಲ್ಲಿ (ಹಳೆಯ ರಾಷ್ಟ್ರೀಯ ಹೆದ್ದಾರಿ-48) ಹಾಸನ (ಹಾಲಿ ಕಿ.ಮೀ.189+700, ಡಿಸೈನ್ ಚೈನೇಜ್ 184+912) ದಿಂದ ಮಾರನಹಳ್ಳಿ (ಹಾಲಿ ಕಿ.ಮೀ.237+000, ಡಿಜೈನ್ ಚೈನೇಜ್ 230+060) ವರೆಗೆ EPC ಆಡಿಯಲ್ಲಿ ಚತುಷ್ಪಥ ರಸ್ತೆ ನಿರ್ಮಾಣ.	ಪ್ರಸ್ತುತ, ರಾಷ್ಟ್ರೀಯ ಹೆದ್ದಾರಿ-75 ರ ಹಾಸನ - ಸಕಲೇಶಪುರ ರಸ್ತೆಯ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ರಸ್ತೆ ಕಾಮಗಾರಿಯ ಮೇಲ್ವಿಚಾರಣೆ ಹಾಗೂ ಕಾಮಗಾರಿಯ ಗುಣಮಟ್ಟ ಖಚಿತಪಡಿಸಿಕೊಳ್ಳಲು ಅಥಾರಿಟಿ ಇಂಜಿನಿಯರ್‌ರಾದ ಮೆ.ರೋಡಿಕ್ ಕನ್ಸಲ್ಟೆಂಟ್ಸ್ ಪ್ರೈ.ಲಿ. ರವರನ್ನು ನೇಮಿಸಲಾಗಿದ್ದು, ಗುತ್ತಿಗೆದಾರರಿಗೆ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಲು ಸೂಚನೆಗಳನ್ನು ನೀಡಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ:ಲೋಇ 242 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ